"ನೀರನ್ನು ಮಿತವಾಗಿ ಬಳಸಿ"
"ಕನ್ನಡದಲ್ಲೇ ವ್ಯವಹರಿಸಿ"

www.bwssb.karnatakagov.in

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

## BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

No : BWSSB ] CHAPM/ 37-2013(P-I)/EST32/ 2064 /2022-23 Date 21.09.2022

### ಅಧಿಸೂಚನೆ

ವಿಷಯ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಿವಿಧ ವಲಯಗಳ ಪುನರ್ ವಿನ್ಯಾಸ (Re-Organisation) ಗೊಳಿಸಿರುವ ಸಂಬಂಧ ಸಿಬ್ಬಂದಿ ನಮೂನೆ (Staffing Pattern) ಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:
1. ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 22 ಎಂಎನ್ಐ 2014 ದಿನಾಂಕ: 13.12.2019.
2. ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 65 ಎಂಎನ್ಐ 2019 ದಿನಾಂಕ: 21.05.2020.
3. ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 53 ಎಂಎನ್ಐ 2022(ಇ) ದಿನಾಂಕ: 16.05.2022.
4. ಮಂಡಳಿಯ ಪುನರ್ ವಿನ್ಯಾಸಗೊಳಿಸಿರುವ ಅಧಿಸೂಚನೆ ಸಂಖ್ಯೆ: CHAPM/433-2016/ EST32/1306/2022-23 dated: 13.07.2022.
5. ಮಾನ್ಯ ಅಧ್ಯಕ್ಷ ರವರು ದಿನಾಂಕ: 20.09.2022ರಂದು ನೀಡಿರುವ ಅನುಮೋದನೆ.

***

ಸರ್ಕಾರವು ಉಲ್ಲೇಖ (1) ಹಾಗೂ (2)ಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಾಲಿ ಮಂಜೂರಾತಿ ನೀಡಿರುವ 4578 ಹುದ್ದೆಗಳ ಜೊತೆಗೆ ನಗರಾಭಿವೃದ್ಧಿ ಇಲಾಖೆಯು ಪತ್ರ ಸಂಖ್ಯೆ: ನಅಇ 53 ಎಂಎನ್ಐ 2022(ಇ) ದಿನಾಂಕ: 16.05.2022ರಲ್ಲಿ 04 ಮುಖ್ಯ ಅಭಿಯಂತರ, 12 ಅಪರ ಮುಖ್ಯ ಅಭಿಯಂತರ ಮತ್ತು 12 ಕಾರ್ಯ ನಿರ್ವಾಹಕ ಅಭಿಯಂತರ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸಿ ಅನುಮೋದನೆ ನೀಡಿರುವ ಮೇರೆಗೆ ಮಂಡಳಿಯ ವಿವಿಧ ವಲಯಗಳನ್ನು ಪುನರ್ ವಿನ್ಯಾಸ ಮತ್ತು ಮರುನಾಮಕರಣಗೊಳಿಸಿ ಉಲ್ಲೇಖ (4)ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ಒಟ್ಟಾರೆಯಾಗಿ ಸರ್ಕಾರವು ಹಾಲಿ ಮಂಜೂರು ಮಾಡಿರುವ 4606 ಸಿಬ್ಬಂದಿ ಸಂಖ್ಯಾ ಬಲವನ್ನು ಆಧರಿಸಿ ಪ್ರಸ್ತುತ ಮಂಡಳಿಯ ಕಾರ್ಯಾಚರಣೆ ವ್ಯವಸ್ಥೆಯ ವಿನ್ಯಾಸ ಹಾಗೂ ಕಾರ್ಯಭಾರಕ್ಕೆ ಅನುಗುಣವಾಗಿ ಸಿಬ್ಬಂದಿ ನಮೂನೆಯನ್ನು (Staffing Pattern) ಸಿದ್ಧಪಡಿಸಿ ಈ ಅಧಿಸೂಚನೆಗೆ ಅಡಕಗೊಳಿಸಿದೆ.

ಮುಂದುವರೆದು, ಆಗಿಂದಾಗ್ಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅವಶ್ಯಕತೆಗಳಿಗೆ ಅನುಗುಣವಾಗಿ ವಲಯ/ವಿಭಾಗ/ಉಪವಿಭಾಗಗಳ ಮರುವಿನ್ಯಾಸ, ಯಾವುದೇ ಕಾರ್ಯವನ್ನು ಯಾವುದೇ ಅಧಿಕಾರಿ/ಸಿಬ್ಬಂದಿಗೆ

ವಹಿಸುವ, ವರ್ಗಾವಣೆ, ಅನ್ಯಸೇವೆ ಮತ್ತು ನಿರ್ದೇಶನ ಮಾಡುವ ಸಂಪೂರ್ಣ ಅಧಿಕಾರವನ್ನು ಮಾನ್ಯ ಅಧ್ಯಕ್ಷರು ಹೊಂದಿರುತ್ತಾರೆ.

ಈ ಅಧಿಸೂಚನೆಗೆ ಮುಂಚಿತವಾಗಿ ಯಾವುದೇ ವಲಯ/ವಿಭಾಗ/ಉಪವಿಭಾಗಗಳಿಗೆ ಸಿಬ್ಬಂದಿ ವೃಂದ ಬಲ ಮಂಜೂರಾತಿಗೊಳಿಸಿ ಆದೇಶಿಸಿರುವುದು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳ್ಳುತ್ತದೆ ಹಾಗೂ ಇನ್ನು ಮುಂದೆ ಹೊಸದಾಗಿ ವಲಯ/ವಿಭಾಗ/ಉಪವಿಭಾಗಗಳನ್ನು ಸೃಜಿಸುವ ಸಂದರ್ಭದಲ್ಲಿ ಸಹಾಯಕ ಸಿಬ್ಬಂದಿ ವ್ಯವಸ್ಥಾಪಕ ಶಾಖೆಯಲ್ಲಿ ಸಿಬ್ಬಂದಿ ವೃಂದ ಬಲ ಮಂಜೂರಾತಿಯ ಅನುಮತಿ ಪಡೆಯದೇ ಆದೇಶಿಸಿದ್ದಲ್ಲಿ ಅಂತಹ ಆದೇಶಗಳು ಊರ್ಜಿತಗೊಳ್ಳುವುದಿಲ್ಲ.

**ಅಡಕ:** ವಲಯ/ವಿಭಾಗ/ಉಪವಿಭಾಗಗಳಸಿಬ್ಬಂದಿ ನಮೂನೆ ವಿವರಗಳು(Staffing Pattern)

**ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ**
**ಬೆಂಗಳೂರು ಜಲಮಂಡಳಿ**

**ಪ್ರತಿಯನ್ನು:**

1. ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ರವರ ಘನ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಅಧ್ಯಕ್ಷ ರವರ ಅವಗಾಹನೆಗೆ ಸಲ್ಲಿಸಿದೆ.
3. ಪ್ರ.ಅ/ಎಲ್ಲಾ ಮು.ಅ ಮತ್ತು ಅ.ಮು.ಅ/ಆ.ಸ ಮತ್ತು ಮು.ಲೆ.ಅ ರವರ ಮಾಹಿತಿಗಾಗಿ.
4. ಆ.ಅ/ಎಲ್ಲಾ ಲೆಕ್ಕಾಧಿಕಾರಿ/ಸಾ.ಸಂ.ಅ/ಸಿ.ನಿ.ಅ/ಸ.ಸಿ.ವ್ಯ/ಕಾ.ಅ ರವರ ಮಾಹಿತಿಗಾಗಿ.
5. ಸನಿ(ಲೆಕ್ಕ) ರವರ ಗಮನಕ್ಕಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ಕಾನಿಅ/ಸಕಾನಿಅ ರವರುಗಳ ಗಮನಕ್ಕಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
7. ಕಾನಿಅ(ಎಂಐಎಸ್) ರವರ ಗಮನಕ್ಕಾಗಿ ಹಾಗೂ ಮಂಡಳಿಯ ಜಾಲತಾಣದಲ್ಲಿ ಅಳವಡಿಸುವ ಸಂಬಂಧ ಸೂಕ್ತ ಕ್ರಮಕ್ಕಾಗಿ.
8. ಹಿ.ವ್ಯ/ಅಧೀಕ್ಷಕರು ಅಧ್ಯಕ್ಷರ ಕಚೇರಿ/ಅಧ್ಯಕ್ಷರ ಕಚೇರಿಯ ಎಲ್ಲಾ ವಿಷಯ ನಿರ್ವಾಹಕರು/ ಗಣಕಯಂತ್ರ ಶಾಖೆ ರವರ ಮಾಹಿತಿಗಾಗಿ.
9. ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ, ಬೆಂ.ಜ.ಮಂ ನೌಕರರ ಸಂಘ/ಬೆಂ.ಜ.ಮಂ ಅಭಿಯಂತರರ ಸಂಘ/ಸ್ಯಾನಿಟರಿ ವರ್ಕರ್ಸ್ ಯೂನಿಯನ್/ಪ.ಜಾ & ಪ.ಪಂ ನೌಕರರ ಕ್ಷೇಮಾಭಿವೃದ್ಧಿ ಸಂಘ ರವರ ಮಾಹಿತಿಗಾಗಿ.